**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆಃ 37/2017**

**ಪಿರ್ಯಾದಿದಾರರುಃ** ರಾಜ್ಯದ ಪರವಾಗಿ

ಚನ್ನರಾಯಪಟ್ಟಣ ನಗರ ಪೋಲೀಸ್ ಠಾಣೆ

**ವಿರುದ್ಧ**

**ಆರೋಪಿತ/ರುಃ** ಯೊಗೇಶ ಜಿ.ಎನ್ ಬಿನ್ ನಾಗೇಶ ಜಿ.ಎಸ್

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ ಆರೋಪಿಗಳ ಹೇಳಿಕೆ**

**ಪ್ರಶ್ನೆ ಃ 1.** ಈ ಪ್ರಕರಣದಲ್ಲಿ ಅಭಿಯೋಜನೆಯ ಪರ ವಿಚಾರಣೆಯಾದ ಸಾಕ್ಷಿದಾರರ ಸಾಕ್ಷ್ಯವನ್ನು ಕೇಳಿರುವಿರಾ ?

**ಆರೋಪಿಯ ಉತ್ತರ :**

**ಪ್ರಶ್ನೆ ಃ 2.** ಪ್ರಾಸಾ.3 ನವೀನ ಎಂ.ಆರ್ ಇವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ದಿನಾಂಕ 20.02.2016 ರಂದು ಬೆಳಿಗ್ಗೆ 11.30 ರ ಸಮಯದಲ್ಲಿ ಚಾಸಾ.6 ರವರು ತನಗೆ ಮತ್ತು ಚಾಸಾ.5 ರವರಿಗೆ ಚನ್ನರಾಯಪಟ್ಟಣ ಟೌನ್ ನ ಎ.ಪಿ.ಎಂ.ಸಿ., ಮಾರುಕಟ್ಟೆಯ ಹೊಸ ಬಳಿ ಇರುವ ಸಾರ್ವಜನಿಕ ಸ್ಥಳದಲ್ಲಿ ಅಕ್ರಮವಾಗಿ ಮದ್ಯವನ್ನು ಮಾರಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿದ್ದು ತಾವುಗಳು ದಾಳಿ ಮಾಡಬೇಕು ಎಂದು ತಿಳಿಸಿದ ಮೇರೆಗೆ ಅದನ್ನು ಪರಿಶೀಲಿಸಲು ತಾನು ಮತ್ತು ಚಾಸ.6 ರವರು ತಮ್ಮ ಬೈಕಿನಲ್ಲಿ ಹೊರಟು ಮಾಹಿತಿ ಇದ್ದ ಸ್ಥಳಕ್ಕೆ 11.45 ಕ್ಕೆ ಗಂಟೆಗೆ ತಲುಪಿರುತ್ತೇವೆ, ಸದರಿ ಸ್ಥಳದಲ್ಲಿ ಮರೆಯಲ್ಲಿ ನಿಂತು ಗಮನಿಸಿದ್ದಾಗ ಒಬ್ಬ ವ್ಯಕ್ತಿ ಪ್ಲಾಸ್ಟಿಕ್ ಕವರಿನಲ್ಲಿ ಮದ್ಯದ ಪ್ಯಾಕೆಟ್ ಮದ್ಯವನ್ನು ಇಟ್ಟುಕೊಂಡು ಜನರಿಗೆ ಮಾರಾಟ ಮಾಡುತ್ತಿದ್ದನ್ನು ಕಂಡು ತಾವುಗಳು ದಾಳಿ ಮಾಡಿ, ಸದರಿ ವ್ಯಕ್ತಿಯನ್ನು ವಿಚಾರಿಸಿದಾಗ ಆತನ ಹೆಸರು ಯೋಗೇಶ ಬಿನ್ ನಾಗೇಶ, ಗೌರಿಕೊಪ್ಪಲು, ಹಾಸನ ಎಂದು ತಿಳಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

**ಆರೋಪಿಯ ಉತ್ತರ :**

**ಪ್ರಶ್ನೆ : 3.** ಪ್ರಾಸಾ.3 ಇವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ ಮುಂದುವರೆದು, ಆರೋಪಿ ವಶದಲ್ಲಿ ಇದ್ದ ಕವರನ್ನು ಪರಿಶೀಲಿಸಲಾಗಿ ಅದರಲ್ಲಿ ಒಟ್ಟು 11 ಕೋಡೇಸ್ ತ್ರಿಬ್ಬಲ್ ಎಕ್ಸ್ ರಂ ನ 180 ಎಂ.ಎಲ್ ನ ಟೆಟ್ರಾ ಪ್ಯಾಕೆಟ್ ಗಳು, ಹಾಗೂ ಫ್ರೆಂಡ್ಸ್ ಕ್ಲಬ್ ಡಿಲಕ್ಸ್ ವಿಸ್ಕಿಯ 180 ಎಂ.ಎಲ್ ನ 14 ಟೆಟ್ರಾ ಪ್ಯಾಕೆಟ್‌ಗಳು ಇದ್ದು ಅವುಗಳನ್ನು ಮಾರಾಟ ಮಾಡಲು, ಪರವಾನಿಗೆ ಇದೆಯೇ ಎಂದು ವಿಚಾರಿಸಲಾಗಿ, ಆತ ಇಲ್ಲ ಎಂದು ತಿಳಿಸಿರುತ್ತಾನೆ, ಆ ದಿನದಂದು ತಾಲ್ಲೂಕು ಮತ್ತು ಜಿಲ್ಲಾ ಪಂಚಾಯ್ತಿಯ ಚುನಾವಣೆ ನಡೆಯುತ್ತಿದ್ದು, ಮದ್ಯಪಾನ ಮಾರಾಟವನ್ನು ನಿಷೇಧಿಸಿದ್ದರೂ ಸಹ ಆರೋಪಿ ಸರ್ಕಾರದ ಆದೇಶವನ್ನು ಮೀರಿ, ಮದ್ಯ ಮಾರಾಟ ಮಾಡುತ್ತಿದ್ದರಿಂದ ಆತನನ್ನು ಸ್ವತ್ತುಗಳೊಂದಿಗೆ ವಶಕ್ಕೆ ಪಡೆದುಕೊಂಡು, ಠಾಣೆಗೆ ಮದ್ಯಾಹ್ನ 12 ಗಂಟೆ ಸಮಯಕ್ಕೆ ಕರೆತಂದು, ಚಾಸ.7 ರವರ ಮುಂದೆ ಹಾಜರುಪಡಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

**ಆರೋಪಿಯ ಉತ್ತರ :**

**ಪ್ರಶ್ನೆ : 4.** ಪ್ರಾಸಾ.4 ವೈರಮುಡಿಗೌಡ ಇವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ದಿಃ20.02.2014 ರಂದು ಮಧ್ಯಾಹ್ನ 12 ಗಂಟೆ ಸಮಯದಲ್ಲಿ ತಾನು ಹಗಲು ಠಾಣಾಧಿಕಾರಿಯಾಗಿ ಇದ್ದಾಗ ಚಾಸಾ.6 ಮತ್ತು ರವರು, ಆರೋಪಿ ಮತ್ತು ವಶಪಡಿಸಿಕೊಂಡಿದ್ದ ವಸ್ತುಗಳೊಂದಿಗೆ ಠಾಣೆಗೆ ಹಾಜರಾಗಿ ಅವುಗಳನ್ನು ತನ್ನ ಮುಂದಿನ ಕ್ರಮಕ್ಕಾಗಿ ಕೊಟ್ಟಿದ್ದು, ವರದಿಯೊಂದಿಗೆ ನೀಡಿದ್ದು, ಅದನ್ನು ಸ್ವೀಕರಿಸಿಕೊಂಡು ಪ್ರಕರಣ ದಾಖಲಿಕೊಂಡು ನಂತರ ಪಂಚರ ಸಮಕ್ಷಮ ಠಾಣೆಯಲ್ಲಿ ಮಹಜರ್ ಜರುಗಿಸಿ ಆರೋಪಿಯ ವಶದಲ್ಲಿದ್ದ ಮಧ್ಯದ ಪ್ಯಾಕೆಟ್ ಗಳನ್ನು ಅಮಾನತ್ತು ಪಡಿಸಿಕೊಂಡು, ನಂತರ ಸಾಕ್ಷಿದಾರರ ಹೇಳಿಕೆ ಪಡೆದು ನಂತರ ಠಾಣೆಯಲ್ಲಿ ದಸ್ತಗಿರಿ ಕ್ರಮವನ್ನು ಅನುಸರಿಸಿ ಆರೋಪಿಯನ್ನು ಸೂಕ್ತ ಜಾಮೀನಿನೊಂದಿಗೆ ಬಿಡುಗಡೆ ಮಾಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

**ಆರೋಪಿಯ ಉತ್ತರ :**

**ಪ್ರಶ್ನೆ : 5 :** ನೀವು ಏನಾದರೂ ಹೇಳಲು ಬಯಸುತ್ತೀರಾ ?

**ಆರೋಪಿಯ ಉತ್ತರ :**

**ಪ್ರಶ್ನೆ : 6 :** ನಿಮ್ಮ ಪ್ರತಿರಕ್ಷಣೆಗೆ ಸಾಕ್ಷಿ ವಿಚಾರಣೆ ಮಾಡಿಸುತ್ತೀರಾ ?

**ಆರೋಪಿಯ ಉತ್ತರ :**

(ಮೇಲೆ ತಿಳಿಸಿದ ಎಲ್ಲಾ ವಿವರಗಳನ್ನು ಓದಿ, ಹೇಳಿ, ಕೇಳಲಾಗಿ ಆತನು ನೀಡಿದ ಉತ್ತರಗಳನ್ನು ಸ್ವತಃ ನನ್ನ ಕೈ ಬರಹದಲ್ಲಿ ಬರೆದು ದೃಢೀಕರಿಸಿರುತ್ತೇನೆ.)

ದಿನಾಂಕಃ **18.12.2025**

(ಶ್ರೀಮತಿ ಕುಸುಮ ವಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.